ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	1976
ಸದಸ್ಯರ ಹೆಸರು	:	ಶ್ರೀ ಸಿ.ಎಂ. ಇಬ್ರಾಹಿಂ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ	:	16-03-2022
ಉತ್ತರಿಸುವ ಸಚಿವರು	:	ಮಾನ್ಯ ಲೋಕೋಪಯೋಗಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಟೋಲ್ ಪ್ಲಾಜ್‌ಗಳೆಷ್ಟು; ಸದರಿ ಟೋಲ್ ಪ್ಲಾಜಾಗಳು ಸರ್ಕಾರದ ನಿರ್ವಹಣೆಯಲ್ಲಿದೆಯೇ ಅಥವಾ ಖಾಸಗಿ ನಿರ್ವಹಣೆಯಲ್ಲಿದೆಯೇ; (ಸಂಪೂರ್ಣ ವಿವರ ನೀಡುವುದು)	• ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ (NHAI) ವ್ಯಾಪ್ತಿಯಲ್ಲಿ 44 ಟೋಲ್ ಪ್ಲಾಜಾಗಳಿರುತ್ತವೆ. ರಾಷ್ಟ್ರೀಯ ಹೆದ್ದಾರಿ ವಲಯ (ಲೋಕೋಪಯೋಗಿ ಇಲಾಖೆ) ವ್ಯಾಪ್ತಿಯಲ್ಲಿ 06 ಟೋಲ್ ಪ್ಲಾಜಾಗಳಿವೆ **(ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ)** ಹಾಗೂ ರಾಜ್ಯ ಹೆದ್ದಾರಿಯಲ್ಲಿ ಕೆ.ಆರ್.ಡಿ.ಸಿ.ಎಲ್ ವ್ಯಾಪ್ತಿಯಲ್ಲಿ 31 ಟೋಲ್ ಪ್ಲಾಜಾಗಳಿವೆ **(ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ)** ಹಾಗೂ ಲೋಕೋಪಯೋಗಿ ಇಲಾಖೆ ಈಶಾನ್ಯ ವಲಯ ವ್ಯಾಪ್ತಿಯಲ್ಲಿ ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನಲ್ಲಿ ಸಂಡೂರು ಪಟ್ಟಣಕ್ಕೆ ಬೈಪಾಸ್ ರಸ್ತೆಯಲ್ಲಿ ಒಂದು ಟೋಲ್ ಪ್ಲಾಜಾ ಇರುತ್ತದೆ. • **ರಾಷ್ಟ್ರೀಯ ಹೆದ್ದಾರಿಯಲ್ಲಿ** 41 ಟೋಲ್ ಪ್ಲಾಜಾಗಳಲ್ಲಿ BOT & DBFOT ಟೆಂಡರ್ ಆಧಾರದಲ್ಲಿ ಪಡೆದಿರುವ ಗುತ್ತಿಗೆದಾರರೊಡನೆ ಏರ್ಪಟ್ಟಿರುವ ಕರಾರಿನಂತೆ ನಿರ್ಮಿಸಿ ನಿರ್ವಹಣೆ ನಡೆಸುತ್ತಾ ಟೋಲ್ ಸಂಗ್ರಹಿಸುತ್ತಾರೆ. ಹಾಗೂ ಹೆಬ್ಬಾಳು, ಚಳ್ಳಗೆರೆ, ಹಿರೇಹಳ್ಳಿ 03 ಟೋಲ್ ಪ್ಲಾಜಾಗಳಲ್ಲಿ ಸಾರ್ವಜನಿಕ ನಿಧಿ (Public Fund) ನಿಂದ ನಿರ್ಮಿಸಿದ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸರ್ಕಾರದಿಂದ ಟೋಲ್ ಸಂಗ್ರಹಣೆ ಮಾಡಲಾಗುತ್ತಿದ್ದು, ಇದಕ್ಕೂ ಸಹ ಟೆಂಡರ್ ಆಧಾರದ ಹೊರ ಗುತ್ತಿಗೆ ಮಾನವ ಸಂಪನ್ಮೂಲದವರನ್ನು ನೇಮಿಸಿ ಟೋಲ್ ಸಂಗ್ರಹಿಸಲಾಗುತ್ತಿದೆ. • ಕೆ.ಆರ್.ಡಿ.ಸಿ.ಎಲ್ ವತಿಯಿಂದ 27 ಟೋಲ್ ರಸ್ತೆಗಳಲ್ಲಿ ಶುಲ್ಕ ಸಂಗ್ರಹಣೆ ಮಾಡಲು ಸರ್ಕಾರದಿಂದ ಆದೇಶವಿದ್ದು, ಈ ಪೈಕಿ 16 ರಸ್ತೆಗಳಲ್ಲಿ ಖಾಸಗಿ ಗುತ್ತಿಗೆದಾರರ ವತಿಯಿಂದ ಶುಲ್ಕ ಸಂಗ್ರಹಣೆಯಾಗುತ್ತಿದೆ. ಒಂದು ರಸ್ತೆಯ ಟೋಲ್ ಪ್ಲಾಜಾವನ್ನು (ಹೊಸಕೋಟೆ-ಚಿಂತಾಮಣಿ) ಟೋಲ್ ಗುತ್ತಿಗೆದಾರರನ್ನು ನೇಮಿಸುವವರೆಗೆ ತಾತ್ಕಾಲಿಕವಾಗಿ ನಿಗಮದ ವತಿಯಿಂದ ನಿರ್ವಹಿಸಲಾಗುತ್ತಿದ್ದು ಟೆಂಡರ್ ಆಹ್ವಾನಿಸಲು ಕ್ರಮ ವಹಿಸಲಾಗಿದೆ. ಉಳಿದ 10 ರಸ್ತೆಗಳಿಗೆ ಟೆಂಡರ್ ಮೌಲ್ಯಮಾಪನ ಪೂರ್ಣಗೊಂಡಿದ್ದು, ಟೆಂಡರ್ ಅನುಮೋದನೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಇದಲ್ಲದೇ 4 ರಸ್ತೆಗಳನ್ನು ಪಿಪಿಪಿ-

		ಡಿಬಿಎಫ್ಓಟಿ–ವಿಜಿಎಫ್ ಮಾದರಿಯಲ್ಲಿ ನಿರ್ಮಿಸಿ ಸದರಿ ರಸ್ತೆಗಳಲ್ಲಿ ರಿಯಾಯಿತಿದಾರರಿಂದ ರಿಯಾಯಿತಿ ಅವಧಿಯ ವರೆಗೆ ಶುಲ್ಕ ಸಂಗ್ರಹಣೆ ಮಾಡಲಾಗುತ್ತಿದೆ. • ಲೋಕೋಪಯೋಗಿ ಇಲಾಖೆಯ ಈಶಾನ್ಯ ವಲಯದ ವ್ಯಾಪ್ತಿಯಲ್ಲಿ ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನಲ್ಲಿ ಸಂಡೂರು ಪಟ್ಟಣಕ್ಕೆ ಬೈಪಾಸ್ ರಸ್ತೆಯನ್ನು PPP ಹಾಗೂ BOT Toll Model ಆಧಾರದ ಮೇಲೆ ಅಭಿವೃದ್ಧಿಗೊಳಿಸಿದ್ದು ಸಂಬಂಧಿಸಿದ Concessionaire ರಿಂದ ಶುಲ್ಕವನ್ನು ಸಂಗ್ರಹಿಸಲಾಗುತ್ತಿದೆ.
ಆ)	ಖಾಸಗಿ ನಿರ್ವಹಣೆಯಲ್ಲಿದ್ದಲ್ಲಿ ಅದಕ್ಕೆ ಇರುವ ಮಾನದಂಡಗಳೇನು; ಗರಿಷ್ಠ ಎಷ್ಟು ಅವಧಿವರೆಗೂ ಶುಲ್ಕ ವಸೂಲಾತಿಗೆ ಅವಕಾಶ ನೀಡಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು)	• ರಾಷ್ಟ್ರೀಯ ಹೆದ್ದಾರಿಗಳಲ್ಲಿ ಭಾರತ ಸರ್ಕಾರದ ಟೋಲ್ ಶುಲ್ಕ ನಿಯಮ 2008 ರನ್ವಯ ಸುಂಕ ವಸೂಲಾತಿ ಮಾಡಲಾಗುತ್ತಿದೆ. ರಾಜ್ಯದಲ್ಲಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮತ್ತು ರಾಷ್ಟ್ರೀಯ ಹೆದ್ದಾರಿ ವಲಯ (ಲೋಕೋಪಯೋಗಿ ಇಲಾಖೆ) ವ್ಯಾಪ್ತಿಯಲ್ಲಿರುವ ಟೋಲ್‌ಗಳಲ್ಲಿ ಟೆಂಡರ್ ಕರಾರಿನಂತೆ ಶುಲ್ಕ ವಸೂಲಾತಿಗೆ ನಿಗಧಿಪಡಿಸಿರುವ ಅವಧಿಯ ವಿವರವನ್ನು ಅನುಬಂಧ–1ರಲ್ಲಿ ನೀಡಲಾಗಿದೆ. • ಕೆ.ಆರ್.ಡಿ.ಸಿ.ಎಲ್ ವತಿಯಿಂದ ಖಾಸಗಿ ನಿರ್ವಹಣೆಯಲ್ಲಿರುವ 27 ಟೋಲ್ ಪ್ಲಾಜಾಗಳಿಗೆ ಶುಲ್ಕ ಸಂಗ್ರಹಣಾ ಗುತ್ತಿಗೆಗಳನ್ನು ಮೂರು ವರ್ಷಗಳ ಅವಧಿಗೆ ಟೆಂಡರ್ ಮುಖೇನ ಅತಿ ಹೆಚ್ಚು ವಾರ್ಷಿಕ ಸಂದಾಯದ ಮೊತ್ತವನ್ನು ನಮೂದಿಸಿರುವ ಗುತ್ತಿಗೆದಾರರಿಗೆ ವಹಿಸಲಾಗುತ್ತಿದೆ. ಸದರಿ ಗುತ್ತಿಗೆದಾರರು ಎರಡನೇ ಹಾಗೂ ಮೂರನೇ ವರ್ಷದಲ್ಲಿ ವಾರ್ಷಿಕ ಸಂದಾಯದ ಮೊತ್ತದ ಶೇ.10% ಮತ್ತು ಶೇ.21% ರಷ್ಟು ಹೆಚ್ಚಳ ಮೊತ್ತವನ್ನು ಸಂದಾಯ ಮಾಡಬೇಕಾಗಿರುತ್ತದೆ. ಇದಲ್ಲದೆ ಟೋಲ್ ಗುತ್ತಿಗೆದಾರರು ಸರ್ಕಾರದಿಂದ ಪ್ರಚುರ ಪಡಿಸಲಾದ ಟೋಲ್ ಅಧಿಸೂಚನೆಗೆ ಅನುಗುಣವಾಗಿ ವಿವಿಧ ಮಾದರಿಯ ವಾಹನಗಳಿಗೆ ನಿಗಧಿಪಡಿಸಿರುವ ದರಗಳಿಗೆ ಅನುಗುಣವಾಗಿ ರಸ್ತೆ ಬಳಕೆದಾರರಿಂದ ಟೋಲ್ ಶುಲ್ಕವನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ. 4 ಟೋಲ್ ಪ್ಲಾಜಾಗಳಿಗೆ PPP-DBFOT-VGF ಅಡಿಯಲ್ಲಿ ರಿಯಾಯಿತಿದಾರರು ಹೂಡಿಕೆ ಮಾಡಿ ಅಭಿವೃದ್ಧಿಪಡಿಸಿದ್ದು, ನಿರ್ಧಿಷ್ಟ ಅವಧಿ ವರೆಗೆ ರಿಯಾಯತಿ ಕರಾರಿರನ್ವಯ ಶುಲ್ಕ ವಸೂಲಾತಿ ಮಾಡುವರು. • ಈಶಾನ್ಯ ವಲಯದ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಸಂಡೂರು ಪಟ್ಟಣಕ್ಕೆ ಬೈಪಾಸ್ ರಸ್ತೆಯ ಟೋಲ್ ಪ್ಲಾಜ ಟೆಂಡರ್‌ನಂತೆ ಪ್ರತಿ ವರ್ಷ 5% ರಷ್ಟು ಶುಲ್ಕವನ್ನು ಹೆಚ್ಚಿಸಬೇಕಾಗಿರುವುದು. ಟೋಲ್ ಸಂಗ್ರಹದ ಅವಧಿ ದಿನಾಂಕ: 18.05.2008 ರಿಂದ 17.05.2028 ರವರೆಗೆ ಗರಿಷ್ಟ 20 ವರ್ಷಗಳ ಕಾಲಾವಧಿ ಇರುತ್ತದೆ.

ಇ)	ಕೆಲವು ಕಡೆ ಖಾಸಗಿ ನಿರ್ವಹಣೆಯಲ್ಲಿರುವ ಟೋಲ್ ಪ್ಲಾಜಾಗಳ ಕರಾರು ಅವಧಿ ಮುಕ್ತಾಯವಾಗಿದ್ದರೂ ಸಹ ಶುಲ್ಕ ವಸೂಲಿ ಮಾಡುತ್ತಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿಟೋಲ್ ಪ್ಲಾಜಾಗಳನ್ನು ತೆರವು ಮಾಡಿ ಮುಕ್ತ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗುವುದೇ?	• ರಾಷ್ಟ್ರೀಯ ಹೆದ್ದಾರಿ-4ರ ಬೆಂಗಳೂರು-ತುಮಕೂರು ಭಾಗದ ಕುಲುಮೆಪಾಳ್ಯ ಮತ್ತು ಚೊಕ್ಕೇನಹಳ್ಳಿಯ ಎರಡು ಟೋಲ್ ಪ್ಲಾಜಾಗಳಲ್ಲಿ ಟೆಂಡರ್ ಅವಧಿ ದಿನಾಂಕ:20.7.2021ಕ್ಕೆ ಮುಕ್ತಾಯಗೊಂಡಿದ್ದು ಸ್ಥಳೀಯ ವೈಯಕ್ತಿಕ ಸಂಚಾರ (Personal traffic) ಮತ್ತು ಸ್ಥಳೀಯ ವಾಣಿಜ್ಯ ಸಂಚಾರ (Local commercial traffic) ಸೋರಿಕೆಯಿಂದ ಮಧ್ಯಸ್ಥಿಕೆ ನ್ಯಾಯಮಂಡಳಿಯಲ್ಲಿ ಅರ್ಬಿಟ್ರೇಷನ್ ಹೋಗಿದ್ದ ಕಾರಣ ಅರ್ಬಿಟ್ರೇಷನ್ ವೇಳೆ 474 ದಿನಗಳ ಟೋಲ್ ವಸೂಲಾತಿಗಾಗಿ ವಿಸ್ತರಿಸಲಾಗಿರುತ್ತದೆ. ಈ ವಿಚಾರವಾಗಿ ಮಾನ್ಯ ಉಚ್ಛನ್ಯಾಯಾಲಯ, ನವದೆಹಲಿ ಇಲ್ಲಿ ಪ್ರಶ್ನಿಸಲಾಗಿದ್ದು, ಸದರಿ ಪ್ರಕರಣದ ವಿಚಾರಣೆಯು ಮುಂದುವರೆದಿದ್ದು ಒಪ್ಪಂದವನ್ನು ರದ್ದುಪಡಿಸಲು ನ್ಯಾಯಾಲಯವು ಅನುಮತಿ ನೀಡಿರುವುದಿಲ್ಲ ಹಾಗೂ ಸದರಿ ಪ್ರಕರಣದ ವಿಚಾರಣೆಯನ್ನು ದಿನಾಂಕ: 24.05.2022ಕ್ಕೆ ನಿಗಧಿಪಡಿಸಲಾಗಿದೆ ಎಂದು NHAI ರವರು ವರದಿಸಿರುತ್ತಾರೆ. • ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ಟೋಲ್ ಪ್ಲಾಜಾಗಳಲ್ಲಿ ಅವಧಿ ಮುಕ್ತಾಯವಾಗಿದ್ದರೂ ಸಹ ಶುಲ್ಕ ವಸೂಲಿ ಮಾಡುತ್ತಿರುವ ಬಗ್ಗೆ ಸಾರ್ವಜನಿಕರಿಂದ ಯಾವುದೇ ದೂರು ಬಂದಿರುವುದಿಲ್ಲ. ನಿಗಮದ ಪರಿಮಿತಿಯಲ್ಲಿ ಟೋಲ್ ಗುತ್ತಿಗೆದಾರರ ಮುಖಾಂತರ ನಿರ್ವಹಿಸುತ್ತಿರುವ ಟೋಲ್ ರಸ್ತೆಗಳ ಪೈಕಿ, ಔರಾದ-ಸದಾಶಿವಗಡ ರಾಜ್ಯ ಹೆದ್ದಾರಿ-34 ರಲ್ಲಿ ಧಾರವಾಡ ಕಿ.ಮೀ. 0.00 ರಿಂದ ಕರಡಿಗುಡ್ಡ ಮಾರ್ಗವಾಗಿ ಸವದತ್ತಿ ಕಿ.ಮೀ. 36.00ರವರೆಗೆ ರಸ್ತೆಯಲ್ಲಿ ಬಳಕೆದಾರರ ಶುಲ್ಕ ಸಂಗ್ರಹಣೆಯನ್ನು ದಿನಾಂಕ:18-02-2019 ರಿಂದ ಪ್ರಾರಂಭಿಸಲಾಗಿದ್ದು, ಟೋಲ್ ಸಂಗ್ರಹಣಾ ಅವಧಿಯು 3 ವರ್ಷಗಳಿಗೆ ನಿಗಧಿಪಡಿಸಿದ್ದು, ಸದರಿ ಅವಧಿಯು ದಿನಾಂಕ:19-02-2022 ಕ್ಕೆ ಮುಕ್ತಾಯಗೊಂಡಿರುತ್ತದೆ. ಸದರಿ ಟೋಲ್ ರಸ್ತೆಗೆ ಟೆಂಡರ್ ಮುಖೇನ ಹೊಸ ಗುತ್ತಿಗೆದಾರರನ್ನು ನೇಮಕ ಮಾಡಲು ಕ್ರಮ ಕೈಗೊಂಡಿದ್ದು, ಹಾಲಿ ಟೋಲ್ ಗುತ್ತಿಗೆದಾರರನ್ನು ಗರಿಷ್ಠ 03 ತಿಂಗಳವರೆಗೆ ಮುಂದುವರೆಸಲು ಗುತ್ತಿಗೆ ಕರಾರಿನಲ್ಲಿ ಅವಕಾಶವಿದ್ದು, ಶುಲ್ಕ ವಸೂಲಾತಿ ನಿಲ್ಲಿಸಿದ ಪಕ್ಷದಲ್ಲಿ ಸರ್ಕಾರಕ್ಕೆ ಉಂಟಾಗಬಹುದಾದ ಆರ್ಥಿಕ ನಷ್ಟ ತಡೆಯಲು ಹೊಸ ಗುತ್ತಿಗೆದಾರರ ನೇಮಕಾತಿಯವರೆಗೆ ತಾತ್ಕಾಲಿಕವಾಗಿ ಸದರಿ ಗುತ್ತಿಗೆಯ ಅವಧಿಯನ್ನು ವಿಸ್ತರಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.

ಕಡತ ಸಂಖ್ಯೆ: ಲೋಇ 101 ಸಿಎನ್‌ಹೆಚ್ 2022 (ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು

National Highways Authority of India

Regional Office-Bangalore LCQ-1976 Annexure-1

RO	PIU	user fee plaza	Tenure		Remarks
NHAI Bangalore	Bangalore	Bangalore-Nelamangala	30.04.2021	30.04.2022	
		Bagepalli	08-01-2022	08-01-2023	
		Sadahalli	01.05.2014	24.04.2030	
		Mulbagal	09.06.2015	21.05.2042	
		Hoskote	04.12.2013	04.01.2028	
	Chitradurga	Kulumepalya	09.02.2004	21.06.2021 (474 days extension)	Arbitrator has awarded 474 days of extension of time. The same is challenged by NHAI in Hon'ble High court, Delhi
		Chokkenahalli			
		Karjeevanahalli	04.06.2011	03.06.2037	
		Guilalu			
		Hebbalu	Public fund		
		Chalagere	Public fund		
		Thimmalapura	21.02.2020	20.02.2041	
		Kananakatte			
		Hirehalli	Public fund		
	Dharwad	Bankapur	08-01-2022	08-01-2023	
		Hiregabewadi	04.05.2011	03.05.2041	
		Hattargi	16.02.2022	16.05.2022	
		Kognoli	17.12.2020	17-03-2022 (extended up to 17.03.2022)	
	Gulbarga	Bijapure	02.05.2012	04.09.2030	
		Nagarahalli			
		Kamkole	14.10.2017	31.03.2039	
		Mangalgi			
		Kannoli	07-01-2022	01-01-2023	
		Harwal			

RO	PIU	user fee plaza	Tenure		Remarks
	Hassan	Doddakarenahalli	25.06.2012	04.01.2033	
		Karbylu	25.06.2012	04.01.2033	
		Shantigrama	14.11.2013	13.12.2040	
		Kirisave	16.11.2013	13.12.2040	
	Hospet	Hitnal	18.09.2010	17.09.2029	
		shapur			
		Vanagiri			
	Mangalore	Brhamarakotlu	02-01-2022	02-01-2023	
		Surathkal	05-01-2022	06-04-2022	
		Gundmi	10.02.2017	04.09.2035	
		Hazmadi	10.02.2017	04.09.2035	
		Talapadi	08.02.2017	04.09.2035	
		Shirur	09.02.2020	03.03.2042	
		Holegadde	09.02.2020	03.03.2042	
		Belekere	09.20.2020	03.03.2042	
	Ramanagara	Electronic	06.04.2010	23-07-2026	
		Attibele			
		Kannegala	23.07.2021	23.07.2022	
		Yeddore			
		K N Hundy			
Details of Toll plazas with National Highways Zone (State PWD)					
	PUNE-Bangalore section NH-4 Hubli - Dharwad bypass from km 403.80 to433.20	Km 404.20 Gabbur	06.05.1998	05.05.2024	
		Km 407.600 near Nekamagar			
		Km 414.600 Tarihal			
		Km 421.00 Yerikoppa			
		Km 429.800 Kelageri			
		Km 433.800 Narendra			

ಅನುಬಂಧ-1

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 254 (1976)
ಮಾನ್ಯ ಸದಸ್ಯರ ಹೆಸರು : **ಶ್ರೀ. ಸಿ.ಎಂ.ಇಬ್ರಾಹಿಂ (ವಿಧಾನಸಭೆಯಿಂದಚುನಾಯಿತರಾದವರು)**
ವಿಷಯ : ಟೋಲ್ ಶುಲ್ಕ ಕುರಿತು

I. **ಕೆ.ಆರ್.ಡಿ.ಸಿ.ಎಲ್ ಹಾಗೂ ಕೆಶಿಫ್ ಸಂಸ್ಥೆಗಳಿಂದ ಅಭಿವೃದ್ಧಿ ಪಡಿಸಿರುವ** ಈ ಕೆಳಕಂಡ 19 ರಸ್ತೆಗಳಲ್ಲಿ ಬಳಕೆದಾರರ ಶುಲ್ಕವನ್ನು (User Fee) ಸಂಗ್ರಹಣೆ ಮಾಡಲು ಸರ್ಕಾರಿಆದೇಶ ಸಂಖ್ಯೆ :ಲೋಇ 118 ಇಎಪಿ 2016 ಬೆಂಗಳೂರು ದಿನಾಂಕ:31-03-2017 ರಲ್ಲಿಅನುಮೋದನೆ ನೀಡಲಾಗಿದೆ. ವಿವರಗಳು ಕೆಳಕಂಡಂತೆ ಇರುತ್ತದೆ.

1. **ಶುಲ್ಕ ಸಂಗ್ರಹಣಾ ಪ್ರಾರಂಭವಾಗಿರುವ ರಸ್ತೆಗಳು**

ಕ್ರ.ಸಂ	ರಸ್ತೆಯ ಹೆಸರು	ಸರ್ಕಾರಿ ಖಾಸಗಿ ನಿರ್ವಹಣೆ	ಟೋಲ್ ಗೇಟ್‌ಗಳ ಸಂಖ್ಯೆ	ಟೋಲ್‌ಗುತ್ತಿಗೆಯಅವಧಿ	ರಾಜ್ಯ ಹೆದ್ದಾರಿ ಸಂಖ್ಯೆ	ಟೋಲ್‌ಗುತ್ತಿಗೆದಾರರ ವಾರ್ಷಿಕ ಸಂದಾಯ ಮೊತ್ತ (ರೂ.ಕೋಟಿಗಳಲ್ಲಿ)	ಟೋಲ್‌ಗುತ್ತಿಗೆದಾರರ /ಕಂಪನಿ ಹೆಸರು	ಟೋಲ್ ಪ್ರಾರಂಭಿಸಿದ ದಿನಾಂಕ
1	ಧಾರವಾಡ-ಕರಡಿಗುಡ್ಡ-ಸವದತ್ತಿರಸ್ತೆ	ಖಾಸಗಿ	1	3 ವರ್ಷ	SH-34	2.57	ಮೆ॥ ವಿನಯ್ ಲಾಡ್‌ಎಂಟರ್ ಪ್ರೈಸಸ್	18-02-2019
2	ಹಾವೇರಿ-ಅಕ್ಕಿಆಲೂರು-ಹನಗಲ್‌ರಸ್ತೆ	ಖಾಸಗಿ	1	3 ವರ್ಷ	SH-02	1.57	ಶ್ರೀ. ವಿನೋದ್‌ಖಾರ್ವಿ	30-11-2020
3	ಮುದೋಳ್-ಚಿಕ್ಕೋಡಿ-ನಿಪ್ಪಾಣಿರಸ್ತೆ	ಖಾಸಗಿ	2	3 ವರ್ಷ	SH-18	7.26	ಮೆ॥ ವಿನಯ್ ಲಾಡ್‌ಎಂಟರ್ ಪ್ರೈಸಸ್	19-10-2019
4	ಶೆಲ್ವಾಡಿ-ಮುಂಡರಗಿರಸ್ತೆ	ಖಾಸಗಿ	1	3 ವರ್ಷ	SH-45	2.78	ಮೆ॥ ಕೇಸರ್‌ಇನ್‌ವೆಸ್ಟ್‌ಮೆಂಟ್ಸ್	16-01-2020
5	ಹುಬ್ಬಳ್ಳಿ-ಕುಂದಗೋಳ-ಲಕ್ಷ್ಮೇಶ್ವರರಸ್ತೆ	ಖಾಸಗಿ	1	3 ವರ್ಷ	SH-73	2.30	ಮೆ॥ ಮಿತ್ರಾಇನ್ಫ್ರಾ ಸಲ್ಯೂಷನ್ಸ್	21-01-2020
6	ಮುದಗಲ್-ತಾವರೆಕೆರೆ-ಗಂಗಾವತಿರಸ್ತೆ	ಖಾಸಗಿ	2	3 ವರ್ಷ	SH-29	1.65	ಮೆ॥ ಮಿತ್ರಾಇನ್ಫ್ರಾ ಸಲ್ಯೂಷನ್ಸ್	26-08-2020
7	ಮಾಗಡಿ-ಪಾವಗಡ-ಎಪಿ ಬಾರ್ಡರ್‌ರಸ್ತೆ	ಖಾಸಗಿ	3	3 ವರ್ಷ	SH-3	7.20	ಮೆ॥ ಮಿತ್ರಾಇನ್ಫ್ರಾ ಸಲ್ಯೂಷನ್ಸ್	18-06-2020

8	ಮಳವಳ್ಳಿ–ಮದ್ದೂರು–ಕೊರಟಗೆರೆರಸ್ತೆ	ಖಾಸಗಿ	2	3 ವರ್ಷ	SH-33	8.75	ಮೆ॥ ಮಿತ್ರಾಇನ್ಫ್ರಾ ಸಲ್ಯೂಷನ್ಸ್	28–05–2020
9	ಸಿಂಧನೂರು–ತಾವರೆಕೆರೆ–ಕುಷ್ಟಗಿ ರಸ್ತೆ	ಖಾಸಗಿ	1	3 ವರ್ಷ	SH-30	2.95	ಮೆ॥ ಕೇಸರ್ಇನ್ವೆಸ್ಟ್‌ಮೆಂಟ್ಸ್	06–05–2020
10	ದಾವಣಗೆರೆ – ಬೀರೂರುರಸ್ತೆ	ಖಾಸಗಿ	2	3 ವರ್ಷ	SH-76	3.52	ಶ್ರೀ. ರವಿ ಮೋಕ್ಷಿತ್	20–04–2021
11	ಪಡುಬಿದ್ರಿ –ಕಾರ್ಕಳ ರಸ್ತೆ		1	3 ವರ್ಷ	SH-1	ಟೆಂಡರ್ ಮೌಲ್ಯಮಾಪನ ಪೂರ್ಣಗೊಂಡಿದ್ದು, ಟೆಂಡರ್ಅನುಮೋದನೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.		
12	ಗುಬ್ಬಿ – ಸಿ.ಎಸ್ ಪುರರಸ್ತೆ		1	3 ವರ್ಷ	SH–84	ಟೆಂಡರ್ ಮೌಲ್ಯಮಾಪನ ಪೂರ್ಣಗೊಂಡಿದ್ದು, ಟೆಂಡರ್ಅನುಮೋದನೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.		
13	ಎಡೆಯೂರು–ಕೌಡ್ಲೆ– ಮಂಡ್ಯರಸ್ತೆರಸ್ತೆ		1	3 ವರ್ಷ	SH– 84	ಟೆಂಡರ್ ಮೌಲ್ಯಮಾಪನ ಪೂರ್ಣಗೊಂಡಿದ್ದು, ಟೆಂಡರ್ಅನುಮೋದನೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.		
14	ಹಾನಗಲ್–ತಡಸ್ರಸ್ತೆ		1	3 ವರ್ಷ	SH-1	ಟೆಂಡರ್ ಮೌಲ್ಯಮಾಪನ ಪೂರ್ಣಗೊಂಡಿದ್ದು, ಟೆಂಡರ್ಅನುಮೋದನೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.		
15	ಶಿವಮೊಗ್ಗ – ಶಿಕಾರಿಪುರ – ಹಾನಗಲ್ರಸ್ತೆ		2	3 ವರ್ಷ	SH-57	ಟೆಂಡರ್ ಮೌಲ್ಯಮಾಪನ ಪೂರ್ಣಗೊಂಡಿದ್ದು, ಟೆಂಡರ್ಅನುಮೋದನೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.		
16	ತಿಂಥಣಿ–ದೇವದುರ್ಗ–ಕಲ್ಮಲಾರಸ್ತೆ		2	3 ವರ್ಷ	SH–61 & SH-15	ಟೆಂಡರ್ ಮೌಲ್ಯಮಾಪನ ಪೂರ್ಣಗೊಂಡಿದ್ದು, ಟೆಂಡರ್ಅನುಮೋದನೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.		
17	ಸವದತ್ತಿ – ಬಾದಾಮಿ–ಕಮಟಗಿರಸ್ತೆ		3	3 ವರ್ಷ	SH-34 & SH-14	ಟೆಂಡರ್ ಮೌಲ್ಯಮಾಪನ ಪೂರ್ಣಗೊಂಡಿದ್ದು, ಟೆಂಡರ್ಅನುಮೋದನೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.		
18	ಬಳ್ಳಾರಿ – ಮೋಕಾ ರಸ್ತೆ		1	3 ವರ್ಷ	SH–132	ಟೆಂಡರ್ ಮೌಲ್ಯಮಾಪನ ಪೂರ್ಣಗೊಂಡಿದ್ದು, ಟೆಂಡರ್ಅನುಮೋದನೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.		
19	ಹೊಸಕೋಟೆಯಿಂದಚಿಂತಾಮಣಿ ಬೈಪಾಸ್ರಸ್ತೆ		2	3 ವರ್ಷ	SH-49	**ಪ್ರಸ್ತುತ ಇಲಾಖಾ ವತಿಯಿಂದ ಶುಲ್ಕ ಸಂಗ್ರಹಣೆತಾತ್ಕಾಲಿಕವಾಗಿ ಮಾಡಲಾಗುತ್ತಿದೆ** ಹಾಗೂ ಹೊಸ ಗುತ್ತಿಗೆದಾರರನ್ನು ನೇಮಿಸಲು ಟೆಂಡರ್ ಮೌಲ್ಯಮಾಪನ ಪೂರ್ಣಗೊಂಡಿದ್ದು, ಟೆಂಡರ್ಅನುಮೋದನೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.		

II. ಹುಡ್ಕೋ (HUDCO) ಸಾಲದ ನೆರವಿನಲ್ಲಿಅಭಿವೃದ್ಧಿ ಪಡಿಸಲಾಗಿರುವ ಈ ಕೆಳಕಂಡ ರಸ್ತೆಯಲ್ಲಿ ಶುಲ್ಕ ಸಂಗ್ರಹಣೆ ಮಾಡಲಾಗುತ್ತಿದೆ.

1. ಶುಲ್ಕ ಸಂಗ್ರಹಣಾ ಪ್ರಾರಂಭವಾಗಿರುವ ರಸ್ತೆಗಳು

ಕ್ರ ಸಂ	ರಸ್ತೆಯ ಹೆಸರು	ಸರ್ಕಾರಿ ಖಾಸಗಿ ನಿರ್ವಹಣೆ	ರಾಜ್ಯ ಹೆದ್ದಾರಿ ಸಂಖ್ಯೆ	ಟೋಲ್‌ಗುತ್ತಿಗೆದಾರರ ವಾರ್ಷಿಕ ಸಂದಾಯ ಮೊತ್ತ (ರೂ.ಕೋಟಿಗಳಲ್ಲಿ)	ಟೋಲ್‌ಗುತ್ತಿಗೆದಾರರ ಹೆಸರು	ಟೋಲ್ ಪ್ರಾರಂಭಿಸಿದ ದಿನಾಂಕ	ಟೋಲ್‌ಗುತ್ತಿಗೆಯಅವಧಿ
1	ಹೊಸಪೇಟೆ-ಸಂಡೂರುರಸ್ತೆ	ಖಾಸಗಿ	SH-49	2.17	ಮೆ॥ ಜೆ.ಕೆ.ಎಲ್ ಸ್ಟೋನ್	01-08-2020	3 ವರ್ಷ
2	ಕೂಡ್ಲಿಗಿ – ಸಂಡೂರು–ತೋರಣಗಲ್ಲುರಸ್ತೆ		SH-40	5.57	ಟೆಂಡರ್ ಮೌಲ್ಯಮಾಪನ ಪೂರ್ಣಗೊಂಡಿದ್ದು, ಟೆಂಡರ್‌ಅನುಮೋದನೆಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.		3 ವರ್ಷ

III. ಕರಅನಿನಿ ವತಿಯಿಂದಕೈಗೊಂಡ ಈ ಕೆಳಕಂಡ ಪಿಪಿಪಿ-ಡಿಬಿಎಫ್‌ಒಟಿ-ವಿಜಿಎಫ್ ರಸ್ತೆಗಳಲ್ಲಿ ನಿರ್ಮಾಣ ವೆಚ್ಚವನ್ನುರಿಯಾಯಿತಿದಾರರು ಹೂಡಿಕೆಮಾಡಿಅಭಿವೃದ್ಧಿ ಪಡಿಸಿದ್ದು, ಸರ್ಕಾರದಅನುಮತಿಯಂತೆ ಸದರಿ ರಸ್ತೆಗಳಲ್ಲಿ ರಿಯಾಯಿತಿದಾರು ನಿರ್ಧಿಷ್ಟಅವಧಿಯ ವರೆಗೆ ಶುಲ್ಕ ವಸೂಲಾತಿ ಮಾಡುವರು.

ಕ್ರಸಂ	ರಸ್ತೆಯ ಹೆಸರು	ಟೋಲ್ ಪ್ರಾರಂಭಿಸಿದ ದಿನಾಂಕ	ರಿಯಾಯಿತಿಅವಧಿ
1	ಯಲಹಂಕ-ಆಂಧ್ರ ಪ್ರದೇಶಗಡಿರಸ್ತೆ	19–09–2018	21 ವರ್ಷ
2	ಗಿಣಿಗೆರೆ–ಗಂಗಾವತಿರಸ್ತೆ	07–09–2015	23 ವರ್ಷ
3	ಧಾರವಾಡ-ರಾಮನಗರರಸ್ತೆ	27–08–2013	29 ವರ್ಷ
4	ವಾಗ್ದಾರಿ–ರಿಬ್ಬನಪಲ್ಲಿರಸ್ತೆ	18–18–2012	30 ವರ್ಷ

IV. ವಿಶ್ವಬ್ಯಾಂಕ್ ನೆರವಿನ ಯೋಜನೆಯಡಿಯಲ್ಲಿ ಕೆ.ಆರ್.ಡಿ.ಸಿ.ಎಲ್ ನಿಂದಅಭಿವೃದ್ಧಿ ಪಡಿಸಲಾದ ಈ ಕೆಳಕಂಡ 6 ರಸ್ತೆಗಳಲ್ಲಿ ಬಳಕೆದಾರರ ಶುಲ್ಕವನ್ನು ಸಂಗ್ರಹಿಸೇ ಸರ್ಕಾರಿಆದೇಶ ಸಂಖ್ಯೆ: ಲೋಇ76 ಇಎಪಿ2014 ಬೆಂಗಳೂರು ದಿನಾಂಕ: 23-03-2016 ರಲ್ಲಿಅನುಮೋದನೆ ನೀಡಲಾಗಿರುತ್ತದೆ. ವಿವರಗಳು ಕೆಳಗಿನಂತೆ ಇರುತ್ತದೆ.

ಕ್ರಸಂ	ರಸ್ತೆಯ ಹೆಸರು	ಸರ್ಕಾರಿ ಖಾಸಗಿ ನಿರ್ವಹಣೆ	ರಾಜ್ಯ ಹೆದ್ದಾರಿ ಸಂಖ್ಯೆ	ಟೋಲ್‌ಗುತ್ತಿಗೆದಾರರ ವಾರ್ಷಿಕ ಸಂದಾಯ ಮೊತ್ತ (ರೂ.ಕೋಟಿಗಳಲ್ಲಿ)	ಟೋಲ್‌ಗುತ್ತಿಗೆದಾರರ ಹೆಸರು	ಟೋಲ್ ಪ್ರಾರಂಭಿಸಿದ ದಿನಾಂಕ	ಟೋಲ್‌ಗುತ್ತಿಗೆಯಅವಧಿ
1	ಬಾಗೆವಾಡಿ-ಸವದತ್ತಿರಸ್ತೆ	ಖಾಸಗಿ	SH-1,30,31,73	2.04	ಶ್ರೀ. ಕೆ.ಎಂ. ಜ್ಯೋತಿ ಪ್ರಕಾಶ್	27-12-2019	3 ವರ್ಷ
2	ಹಾಸನ-ಪಿರಿಯಾಪಟ್ಟಣರಸ್ತೆ	ಖಾಸಗಿ	SH-21	3.15	ಮೆ॥ ಮಿತ್ರಾಇನ್ಫ್ರಾ ಸಲ್ಯೂಷನ್ಸ್	23-01-2020	3 ವರ್ಷ
3	ಹಿರೇಕೆರೂರು-ರಾಣಿಬೆನ್ನೂರುರಸ್ತೆ	ಖಾಸಗಿ	SH-62 &78	1.10	ಶ್ರೀ. ಕೆ.ಎಂ. ಜ್ಯೋತಿ ಪ್ರಕಾಶ್	23-01-2020	3 ವರ್ಷ
4	ಮುಂಡರಗಿ-ಹರಪ್ಪನಹಳ್ಳಿ ರಸ್ತೆ	ಖಾಸಗಿ	SH-45 &47	2.03	ಶ್ರೀ. ಕೆ.ಎಂ. ಹಂಚಿನಾಳ್	13-12-2019	3 ವರ್ಷ
5	ಹುನಗುಂದ-ತಾಳಿಕೋಟೆ ರಸ್ತೆ	ಖಾಸಗಿ	SH-41 &60	1.07	ಮೆ॥ ಮಿತ್ರಾಇನ್ಫ್ರಾ ಸಲ್ಯೂಷನ್ಸ್	31-12-2019	3 ವರ್ಷ
6	ಬೀದರ್-ಚಿಂಚೋಳಿ ರಸ್ತೆ	ಖಾಸಗಿ	SH-15	2.50	ಮೆ॥ ಜೆ.ಕೆ.ಎಲ್ ಸ್ಟೋನ್	01-09-2021	3 ವರ್ಷ

ಮುಖ್ಯಇಂಜಿನಿಯರ್
ಕ.ರ.ಅ.ನಿ.ನಿ, ಬೆಂಗಳೂರು